# ಅಕ್ಟೋಬರ್, 2017 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ಸಸಿಗಳನ್ನು ನಾಟಿ ಮಾಡಿದ ನಂತರ ಒಂದು ಮೀಟರ್ ಸುತ್ತಳತೆಯಲ್ಲಿ ನೀರನ್ನು ಚೆನ್ನಾಗಿ ನೀಡಬೇಕು. ನೀರಾವರಿ ಕಾಲುವೆಗಳನ್ನು ಉಪ ಕಾಲುವೆಗಳ ಮುಕಾಂತರ ಪ್ರತಿ ತಾಳೆ ಗಿಡಕ್ಕೆ ಸೇರಿಸಿ ವಾರದಲ್ಲಿ ಎರಡು ದಿನ ನೀರನ್ನು ಹಾಯಿಸಬೇಕು.

- ತಾಳೆ ಸಸಿಗಳಿಗೆ ನೀಡಲಾದ ರಾಸಾಯನಿಕ ಗೊಬ್ಬರವನ್ನು ಸಸಿಗಳು ಸದುಪಯೋಗಪಡಿಸಿಕೊಳ್ಳಲು ತಾಳೆ ಸಸಿಗಳಿಗೆ ನೀರುಣಿಸುವ ಸಂದರ್ಭದಲ್ಲಿ ತಾಳೆ ಮರಗಳ ಸಾಲಿನ ಮದ್ಯೆ ಮುಖ್ಯ ಕಾಲುವೆಗಳನ್ನು ಮಾಡಿ ಪ್ರತಿಯೊಂದು ಮರಕ್ಕೆ ಪ್ರತ್ಯೇಕವಾದ ಉಪ ಕಾಲುವೆಗಳ ಮೂಲಕ ನೀರನ್ನು ಹಾಯಿಸುವುದು ಸೂಕ್ತ. ಯಾವುದೇ ಕಾರಣಕ್ಕೂ ನೀರು ಒಂದು ಮರದಿಂದ ಇನ್ನೊಂದು ಮರಕ್ಕೆ ಕಾಲುವೆಯ ಮೂಲಕ ಹರಿಯುವುದನ್ನು ತಡೆಗಟ್ಟುವುದು.

- ಮಳೆಗಾಲದಲ್ಲಿ ಹೆಚ್ಚಿನ ನೀರನ್ನು ಹೊರ ಹಾಕಲು ತಾಳೆ ತೋಟದಲ್ಲಿ ೩ ರಿಂದ ೪ ತಾಳೆ ಮರಗಳ ಸಾಲಿನ ಅಡ್ಡಲಾಗಿ ಬಸಿ ಕಾಲುವೆಗಳನ್ನು (೧ ಅಡಿ ಅಗಲ ಮತ್ತು ೨ ಅಡಿ ಆಳ) ನಿರ್ಮಿಸುವುದು ಸೂಕ್ತ.

- ತಾಳೆ ಗಿಡಗಳಿಗೆ ಪ್ರತಿ 3 ತಿಂಗಳಿಗೊಮ್ಮೆ ಗೊಬ್ಬರಗಳನ್ನು ನೀರಾವರಿ ಪ್ರದೇಶಗಳಲ್ಲಿ ನೀದಬೇಕು.